**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 13 ಪ್ರಾ.ಸಾ. : 11**

ಸಾಕ್ಷಿಯ ಹೆಸರು : ಶೈಲಾ
ಗಂಡನ ಹೆಸರು : ಗೋಪಾಲ ನಾಯ್ಕ
ವಯಸ್ಸು : 67 ವರ್ಷ
ಉದ್ಯೋಗ : ನಿವೃತ್ತ , ಬೆರಳಚ್ಚುಗಾರಳು.
ವಾಸ : ಕುಮಟಾ

**ದಿನಾಂಕಃ 03-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಮೇ 2005 ರಿಂದ 05.07.2013 ರವರೆಗೆ ಬೆರಳಚ್ಚುಗಾರತಿಯಾಗಿ ಕುಮಟಾ ತಾಲೂಕು ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ. ಆರೋಪಿ ನನ್ನ ಕಚೇರಿಯಲ್ಲಿ ಅಕ್ಷರ ದಾಸೋಹ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ , ಆರೋಪಿ ಯಾವ ಕೆಲಸ ಅಲ್ಲಿ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ನನಗೆ ರಾಮ ನಾಯ್ಕ ನನಗೆ ಗೊತ್ತಿಲ್ಲ. (ಸಾಕ್ಷಿ ನ್ಯಾಯಾಲಯದಲ್ಲಿ ಅನಾವಶಕವಾಗಿ ನಗೆಯುತ್ತಿದ್ದಾಳೆ , ನ್ಯಾಯಾಲಯದ ಬಗ್ಗೆ ಗೌರವ ಹೊಂದಿರುವ ರೀತಿ ಕಾಣುವುದಿಲ್ಲ.) ರಾಮ ನಾಯ್ಕ ಆರೋಪಿ ಕಚೇರಿಗೆ ಬಂದು ಹೋಗಿರುವುದು ನಾನು ನೋಡಿಲ್ಲ. ದಿನಾಂಕ 17.09.2013 ರಂದು ನಾನು ಕಚೇರಿಗೆ ಬಂದಾಗ ಪಿರ್ಯಾದುದಾರ ಕಚೇರಿಗೆ ಬರುವುದನ್ನು ನೋಡಿದೆನಾ ಎಂದರೆ ನಾನು ದಿನಾಂಕ 05.07.2013 ರಂದೆ ವರ್ಗಾವಣೆಯಾಗಿ ಅಲ್ಲಿಂದ ಹೊರಟು ಹೋಗಿದ್ದೆ. ದಿನಾಂಕ 17.09.2013 ರಲ್ಲಿ ನಾನು ಆ ಕಚೇರಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ. ನಾನು ದಿನಾಂಕ 17.09.2013 ರಂದು ಕುಮಟಾ ತಾಲೂಕು ಕಚೇರಿಯಲ್ಲಿಯೇ ಕೆಲಸ ಮಾಡುತ್ತಿದ್ದೆ ಎಂದರೆ ನಾನು ನನ್ನ ರಿಲೀವಿಂಗ್ ಪತ್ರವನ್ನು ಹಾಜರುಪಡಿಸುತ್ತೇನೆ ಎಂದು ಸಾಕ್ಷಿ ಹೇಳುತ್ತಾಳೆ. "ನಮ್ಮ ಕಚೇರಿಯಲ್ಲಿ ತಾಲೂಕಾ ಸಹಾಯ ನಿರ್ದೇಶಕರು ಅಕ್ಷರ ದಾಸೋಹ ರವರ ಶ್ರೀ ಗಣೇಶ ನಾಯ್ಕ ... ... ... ದಸ್ತಗಿರಿ ಮಾಡಿ ಒಯಿದ ವಿಷಯ ತಿಳಿಯಿತು " ಎಂದು ನಾನು ದಿನಾಂಕ 23.09.2013 ರಂದು ಕಾರವಾರದ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರಿಗೆ ಹೇಳಿಕೆ ಕೊಟ್ಟಿದೆನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪೂರ್ತಿ ಹೇಳಿಕೆಯನ್ನು ವಿಷೇಶ ಸರ್ಕಾರಿ ಅಭಿಯೋಜಕರು ಓದಿ ಹೇಳಿದ್ದಾರೆ ಆದರೆ ಸಾಕ್ಷಿ ಹೇಳಿಕೆಯನ್ನು ಅಲ್ಲಗೆಳೆದಿದ್ದಾಳೆ. ಹೇಳಿಕೆಯನ್ನು ನಿಪಿ-42 ಎಂದು ಗುರುತಿಸಲಾಯಿತು. ಆರೋಪಿ ನನ್ನ ಜೊತೆ ಕೆಲಸ ಮಾಡುತ್ತಿದ್ದ ಕಾರಣ ಅವನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ಪರ ಪಿ ಸಿ ಕೆ ರವರಿಂದ**

3. ಏನೂ ಇಲ್ಲ ಎಂದು ಹೇಳಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ